# ರಾಹುಲ್ ಗಾಂಧಿ ಸಿದ್ಧಾಂತ ಸರಿ, ಆದರೆ ವಸ್ತುಸ್ಥಿತಿ ಅರಿವು ಅವರಿಗಿಲ್ಲ

ಅರುಣ್ ಜೇಟ್ಲಿ
ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಶ್ರೀ ರಾಹುಲ್ ಗಾಂಧಿ ಸರಿಯಾಗೇ ಅರ್ಥ ಮಾಡಿಕೊಂಡಿದ್ದಾರೆ. ರಾಜಕೀಯ ಪಕ್ಷಗಳು ಓರ್ವ ವ್ಯಕ್ತಿಯನ್ನೇ ಅವಲಂಬಿಸಲು ಸಾಧ್ಯವಿಲ್ಲ. ಒಂದು ರಾಜಕೀಯ ಪಕ್ಷಕ್ಕೆ ವ್ಯವಸ್ಥಿತ ಸ್ವರೂಪವಿರುತ್ತದೆ, ಸಿದ್ಧಾಂತವಿರುತ್ತದೆ ಹಾಗೂ ಆಂತಿರಿಕ ಪ್ರಜಾಪ್ರಭುತ್ವ ತತ್ವಗಳನ್ನು ಅನುಸರಿಸಲಾಗುತ್ತದೆ. ಓರ್ವ ವ್ಯಕ್ತಿಯ ಮರ್ಜಿಯಂತೆ ಅದನ್ನು ನಡೆಸಲು ಸಾಧ್ಯವಿಲ್ಲ. ಸ್ವರೂಪ ಕಳೆದುಕೊಂಡ, ವೈಯಕ್ತಿಕ ವರ್ಚಸ್ಸಿಗೆ ಜೋತುಬಿದ್ದ ಕೆಲವು ಭಾರತೀಯ ರಾಜಕೀಯ ಪಕ್ಷಗಳು ಎದುರಿಸಿದ ಸಂಕಷ್ಟಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡೋಣ.

ಪಂಡಿತ್ ಜವಾಹರ್‌ಲಾಲ್ ನೆಹರು, ನಮ್ಮ ಮೊದಲ ಪ್ರಧಾನಮಂತ್ರಿ ವರ್ಚಸ್ವಿ ವ್ಯಕ್ತಿತ್ವ ಹೊಂದಿದ್ದರು. ಕಾಂಗ್ರೆಸ್ 1950ರ ದಶಕದಲ್ಲಿ ಅವರೊಂದಿಗೆ ತನ್ನನ್ನು ಗುರುತಿಸಿಕೊಂಡಿತು. ಇದರಿಂದಾಗಿ ನೆಹರು ಅವರ ಮಾತಿಗೆ ಒಪ್ಪದ ಅನೇಕ ರಾಜಕಾರಣಿಗಳು ಮೂಲೆಗುಂಪಾದರು. ಶ್ರೀಮತಿ ಇಂದಿರಾ ಗಾಂಧಿಯವರನ್ನು 1950ರಲ್ಲಿ ಎಐಸಿಸಿ ಆಧ್ಯಕ್ಷೆಯಾಗಿ ನೇಮಿಸಿದ ಬಳಿಕ ವಂಶಾವಳಿ ಆಳ್ವಿಕೆಗೆ ಕಾಂಗ್ರೆಸ್ ಪಕ್ಷ ಅಧಿಕೃತ ಚಾಲನೆ ನೀಡಿತು. ಮಗಳು ಪ್ರಧಾನ ಮಂತ್ರಿಯಾಗಲು ಹಲವಾರು ಹಿರಿಯ ನಾಯಕರನ್ನು ಕಡೆಗಣಿಸಲಾಯಿತು.

ಶ್ರೀಮತಿ ಇಂದಿರಾ ಗಾಂಧಿ ಅವರ ವ್ಯಕ್ತಿತ್ವ ರಾಜಕೀಯ ವಲಯವನ್ನು ಆವರಿಸಿತು. ಆದ್ದರಿಂದ ಕಾಂಗ್ರೆಸ್ ಪಕ್ಷ 1969ರಲ್ಲಿ ಇಬ್ಭಾಗವಾಯಿತು. 1973ರಲ್ಲಿ ಭಾರತದ ನ್ಯಾಯಾಂಗಕ್ಕೆ ಅಪಚಾರ ಮಾಡುವ ಪ್ರಯತ್ನವು ನಡೆದು ತದನಂತರ ಅದು ಕಾಂಗ್ರೆಸ್ ಸಿದ್ಧಾಂತವಾಗಿದೆ. 1975ರಲ್ಲಿ ತುರ್ತುಪರಿಸ್ಥಿತಿ ಹೇರಿದ ನಂತರ, ದಬ್ಬಾಳಿಕೆ ಕಾಂಗ್ರೆಸ್ ಸಿದ್ಧಾಂತವಾಗಿ ರೂಪುಗೊಂಡಿದೆ. ಸಂಸ್ಥೆಗಳನ್ನು ಧ್ವಂಸಗೊಳಿಸುವ ಜೊತೆಗೆ ವಿಪಕ್ಷಗಳು, ಸಂಸತ್, ಮಾಧ್ಯಮ ಹಾಗೂ ನ್ಯಾಯಾಂಗಕ್ಕೆ ಸರ್ವಾಧಿಕಾರದ ರುಚಿ ತೋರಿಸಲಾಯಿತು. ಭಾರತವೆಂದರೆ ಇಂದಿರ, ಇಂದಿರವೆಂದರೆ ಭಾರತ ಎಂಬ ಪಕ್ಷದ ಘೋಷಣೆಯನ್ನು ಎಐಸಿಸಿ ಅಧ್ಯಕ್ಷರ ಮೂಲಕ ಅಧಿಕೃತ ಪ್ರಕಟಣೆ ಹೊರಡಿಸಲಾಯಿತು. ತುರ್ತುಪರಿಸ್ಥಿತಿಯಲ್ಲಿ ಆರ್ಥಿಕ ಕಾರ್ಯಕ್ರಮಗಳ ಮೂಲಕ ಆಕೆ ಆರ್ಥಿಕ ನಿಯಂತ್ರಣಗಳನ್ನು ಜಾರಿಗೆ ತಂದರು ಮತ್ತು ಇದನ್ನೇ ಕಾಂಗ್ರೆಸ್ ಸಿದ್ಧಾಂತವಾಗಿ ಮುಂದುವರಿಸಲಾಯಿತು.

1984ರಲ್ಲಿ ಬ್ಲೂ ಸ್ಟಾರ್ ಕಾರ್ಯಾಚರಣೆ ಮೂಲಕ ಸಿಖ್ ವಿರೋಧಿ ಭಾವನೆಗಳನ್ನು ಹುಟ್ಟಿಸಲಾಯಿತು. ಒಂದು ಸಮುದಾಯದ ನರಮೇಧವನ್ನು ಸಮರ್ಥಿಸುವುದೇ ಪಕ್ಷದ ಕಾರ್ಯಕ್ರಮವಾಯಿತು. ಪ್ರಾರಂಭದಲ್ಲಿ ಶ್ರೀ ರಾಜೀವ್ ಗಾಂಧಿಯವರು ಹಿಂದಿನ ಕಾರ್ಯವೈಖರಿಗಿಂತ ಭಿನ್ನವಾಗಿ ವರ್ತಿಸಿದ್ದರು. ಆದರೆ 1987ರ ವೇಳೆಗೆ ಹಗರಣಗಳನ್ನು ಸಮರ್ಥಿಸುವುದು ಮತ್ತು ಮರೆಮಾಚುವುದೇ ಪಕ್ಷದ ಬದ್ಧತೆಯ ಭಾಗವಾಗಿ ರೂಪುಗೊಂಡಿತು. ಕಪೋಲಕಲ್ಪಿತ ಸೇಂಟ್ ಕಿಟ್ಸ್ ಪ್ರಕರಣದಲ್ಲಿ ಶ್ರೀ ವಿ.ಪಿ.ಸಿಂಗ್ ಅವರ ಮಗನನ್ನು ಆರೋಪಿತನಾಗಿ ಮಾಡಲು ಹಿರಿಯ ನಾಯಕರು ಪ್ರಯತ್ನಿಸುವಾಗ, ಇಡೀ ಪಕ್ಷ ಕಟ್ಟುಕಥೆ ಕಟ್ಟುವಲ್ಲಿ ಕೈಜೋಡಿಸಿತು. ಪಕ್ಷದ ವ್ಯಕ್ತಿತ್ವ ಅವಲಂಬಿತ ರಾಜಕಾರಣಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಬೇಕೆ?

ಸೋನಿಯ ಗಾಂಧಿಯವರು ತಮ್ಮ ಹಕ್ಕೊತ್ತಾಯ ಮಾಡುವ ರೀತಿಯಲ್ಲಿ ರಾಜಕಾರಣ ಪ್ರವೇಶಿಸಿದರು. ಆಗ ಆ ಪಕ್ಷವು ವಿದೇಶಿ ಮೂಲದ ವ್ಯಕ್ತಿಗೆ ಭಾರತದ ಪ್ರಧಾನ ಮಂತ್ರಿ ಸ್ಥಾನ ನೀಡಬಹುದೆಂಬ ಸಿದ್ಧಾಂತವನ್ನು ಒಪ್ಪಿಕೊಂಡಿತು. ಆದರೆ ಆಕೆ ಕಡೆಗೆ ಹುದ್ದೆ ಸ್ವೀಕರಿಸಲಿಲ್ಲ. ಆಗ ಪಕ್ಷ ಪರಿತ್ಯಾಗದ ಪ್ರಶಂಸನೀಯ ಮಾತುಗಳನ್ನು ಆಡಿತು. ಕೇಂದ್ರ ಸಂಪುಟದ ನಿರ್ಧಾರವನ್ನು ಅವಿವೇಕದ ನಿರ್ಧಾವೆಂದು ಶ್ರೀ ರಾಹುಲ್ ಗಾಂಧಿ ತೆಗೆದುಕೊಂಡ ನಿರ್ಧಾರದಿಂದ, ಪಕ್ಷಕ್ಕಿಂತ ಒಬ್ಬ ವ್ಯಕ್ತಿ ಮೇರು ಸ್ಥಾನಪಡೆದಿರುವ ಅಂಶವನ್ನು ರುಜುವಾತು ಮಾಡಿದೆ. ಭಾಜಪ ಅಥವಾ ಎಡ ಪಕ್ಷಗಳು ವ್ಯವಸ್ಥಿತ ಸ್ವರೂಪವನ್ನು ಹೊಂದಿವೆ. ಅಂಥಹ ಪಕ್ಷಗಳಲ್ಲಿ ಶ್ರೀ ರಾಹುಲ್ ಗಾಂಧಿಯವರು ಪಕ್ಷದಲ್ಲಿ ಅಥವಾ ಶಾಸನಸಭೆಯಲ್ಲಿ ಪದಾದಿಕಾರಿ ಆಗಲು ಸಂಘರ್ಷಿಸಬೇಕಿತ್ತು. ಕೇವಲ ಕಾಂಗ್ರೆಸ್‌ನಂತಹ ವ್ಯಕ್ತಿಗಳಿಗೆ ಪ್ರಾಮುಖ್ಯತೆ ನೀಡುವ ಹಾಗೂ ಕುಟುಂಬ ಪ್ರಾಬಲ್ಯ ಹೊಂದಿದ ಪಕ್ಷಗಳಲ್ಲಿ ಮಾತ್ರ ಪ್ರಶ್ನಾತೀತ ಮಹಾನಾಯಕರನ್ನು ಒಪ್ಪುವ ಸನ್ನಿವೇಶವಿರುತ್ತದೆ.

ವೈಯಕ್ತಿಕ ವರ್ಚಸ್ಸಿನ ಪ್ರಭಾವದಿಂದ ಹೊರಗುಳಿದ ಇಬ್ಬರು ಕಾಂಗ್ರೆಸ್ ಪ್ರಧಾನ ಮಂತ್ರಿಗಳು ತಮ್ಮದೇ ಪ್ರತ್ಯೇಕತೆಯನ್ನು ಉಳಿಸಿಕೊಂಡಿದ್ದರು. ಶ್ರೀ ಲಾಲ್ ಬಾಹಾದುರ್ ಶಾಸ್ತ್ರಿ ಸ್ವಲ್ಪ ಸಮಯದವರೆಗೂ ಪ್ರಧಾನಮಂತ್ರಿಗಳಾಗಿದ್ದರು. ಅವರ ಸರಳತೆ ಮತ್ತು ಉನ್ನತ ವಿಶ್ವಾಸಾರ್ಹತೆ ದೇಶಕ್ಕೆ ಸ್ಫೂರ್ತಿದಾಯಕವಾಗಿದೆ. ಅವರ ಒಳ್ಳೆಯತನ ಕಾಂಗ್ರೆಸ್ ಪರಂಪರೆ ಅಲ್ಲ. ಕೆಲವು ವೈಫಲ್ಯಗಳ ಹೊರತಾಗಿಯೂ, ಭಾರತದ ಆರ್ಥವ್ಯವಸ್ಥೆ ಹಾಗೂ ವಿದೇಶ ನೀತಿ ಸುಧಾರಿಸುವಲ್ಲಿ ಪ್ರಮುಖ ಪಾತ್ರವಹಿಸಿದ ನಾಯಕ ಶ್ರೀ ಪಿ.ವಿ. ನರಸಿಂಹ ರಾವ್ ಅವರ ಹೆಸರು ಇತಿಹಾಸದಲ್ಲಿ ಉಳಿಯುತ್ತದೆ. ಕಾಂಗ್ರೆಸ್ ಪಕ್ಷದ ಬಿತ್ತಿಪತ್ರಗಳಲ್ಲಿ ಅವರು ಕಾಣಿಸುವುದೇಯಿಲ್ಲ.

ಶ್ರೀ ಅಟಲ್ ಬಿಹಾರಿ ವಾಜಪೇಯಿ ಹಾಗೂ ಶ್ರೀ ನರೇಂದ್ರ ಮೋದಿಯಂತಹ ಜನಪ್ರಿಯ ನಾಯಕರನ್ನು ಹೊಂದಿದ ಭಾಜಪ ಏಕ ವ್ಯಕ್ತಿ ಅವಲಂಬಿತ ಪಕ್ಷವಾಗಲು ಎಂದಿಗೂ ಸಾಧ್ಯವಿಲ್ಲ. ನಮ್ಮ ನಾಯಕರು ಸದಾ ಪಕ್ಷದ ವ್ಯವಸ್ಥಿತ ಸ್ವರೂಪದ ಭಾಗವಾಗಿದ್ದರು, ಮುಂದೆಯೂ ಇರುತ್ತಾರೆ. ಕಾಂಗ್ರೆಸ್ ಪಕ್ಷವು ಓರ್ವ ವ್ಯಕ್ತಿ ಅವಲಂಬಿತ ಪಕ್ಷವೆಂದು ಸರಿಯಾಗಿ ಗುರುತಿಸಿರುವ ಶ್ರೀ ರಾಹುಲ್ ಗಾಂಧಿಯವರಿಗೆ, ವಾಸ್ತವಾಂಶದ ಅರಿವಿಲ್ಲ.